THE MYSORE LEGISLATIVE ASSEMBLY

THIRTY-EIGHTH DAY.

Monday, 17th April, 1961.

The House met in the Assembly Hall, Vidhana Soudha, Bangalore, at One of the Clock.

[MR. SPEAKER (Sri S. R. KANTHI, B.A., LL.B.) in the Chair.]

STARRED QUESTIONS

(to which oral answers were given)

TRACTORS, BULLDOZERS, LORRIES AND TRUCKS OWNED BY THE AGRICULTURAL DEPARTMENT.

*Q.—80. Sri K. KENCHAPPA (Hiriyur).—

Will the Government be pleased to state:—

(*a*) the number of tractors, bulldozers, lorries and trucks owned by the Agricultural Department during 1958-59, 1959-60 and 1960-61 ;

(*b*) the number of them in working order ;

(*c*) the rent or hire charges realised from them during the above period ;

(*d*) the number of them repaired and cost met during the said period ;

(*e*) the recurring cost of establishment on them ?

*A.—Sri N. RACHAIAH (Minister for Agriculture and Social Welfare).—

		1958-59	1959-60	1960-61
(*a*) (i) Tractors	...	187	184	166
(ii) Bulldozers	...	51	51	53
(iii) Lorries	...	24	24	28
(iv) Trucks	...	1	1	1
(*b*) (i) Tractors	...	43	45	44
(ii) Bulldozers	...	40	32	40

(Sri N. RACHAIAH)

		1958-59	1959-60	1960-61
			Rs. in lakhs.	
(c)	...	7.39	8.14	5.28
(d)	...	2.56	3.78	1.50
		No.	No.	No.
(i) Tractors	...	3	3	3
(ii) Bulldozers	...	7	6	10
(iii) Lorries	...	25	25	20
			Rs. in lakhs.	
(e)		2.07	3.27	2.27

ಶ್ರೀ ಕೆ. ಕೆಂಚಪ್ಪ.—(ಬ) ಗೆ ಉತ್ತರವಾಗಿ ಟ್ರಾಕ್ಟರುಗಳು 43, 45, ಮತ್ತು 44 ಎಂದು ಹೇಳಿದ್ದೀರಿ. (ಡಿ) ಗೆ ಉತ್ತರವಾಗಿ 2.56 ಲಕ್ಷ, 3.78 ಲಕ್ಷ ಮತ್ತು 1.50 ಲಕ್ಷ, ಬರೀ ರಿಪೇರಿಗಾಗಿ ಖರ್ಚಾಗಿದೆ ಎಂದು ಹೇಳಿದ್ದೀರಿ. ಈಗೆ ರಿಪೇರಿಗಾಗಿ ಖರ್ಚು ಮಾಡುವುದಕ್ಕಿಂತ ಇವನ್ನು ಕೊಂಡುಕೊಂಡಿದ್ದರೆ ಎಷ್ಟು ಖರ್ಚಾಗುತ್ತಿತ್ತು ?

†ಶ್ರೀ ಎನ್. ರಾಚಯ್ಯ.—ಇರತಕ್ಕ ಮೆಷಿನ್ನುಗಳನ್ನು ನಾವು ರಿಪೇರಿ ಮಾಡಿ ಸಾಧ್ಯವಾದಷ್ಟು ಎಕನಾಮಿಕ್ ಆಗಿ ಉಪಯೋಗಿಸಬೇಕು ಎಂದು ಮಾಡಿದೆ.

ಶ್ರೀ ಕೆ. ಕೆಂಚಪ್ಪ.—ರಿಪೇರಿ ಮಾಡದೇನೇ ಇವುಗಳನ್ನು ಕೊಂಡು ಕೊಂಡಿದ್ದರೆ ಎಷ್ಟು ಖರ್ಚಾಗುತ್ತಿತ್ತು ?

ಶ್ರೀ ಎನ್. ರಾಚಯ್ಯ.—ತಾವೇ ರೆಕ್ಕ ಹಾಕಿಕೊಂಡು ನೋಡಿದರೆ ನಿಮಗೇ ಗೊತ್ತಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ಒಂದು ವೇಳೆ ಈ ಟ್ರಾಕ್ಟರು ಮತ್ತು ಬುಲ್‌ಡೋಜರುಗಳನ್ನು ಕೊಂಡುಕೊಂಡಿದ್ದರೆ ಎಷ್ಟು ಖರ್ಚು ಬರುತ್ತಿತ್ತು ?

ಶ್ರೀ ಎನ್. ರಾಚಯ್ಯ.—ಕೊಂಡುಕೊಳ್ಳದೆ ಇರುವ ಯಂತ್ರಗಳನ್ನು ರಿಪೇರಿ ಮಾಡಿ ರೈತರಿಗೆ ಉಪಯೋಗಕ್ಕಾಗಿ ಕೊಡಬೇಕೆಂದು ಈ ಟ್ರಾಕ್ಟರುಗಳನ್ನು ಮತ್ತು ಬುಲ್‌ಡೋಜರುಗಳನ್ನು ರಿಪೇರಿ ಮಾಡಲಾಯಿತು. ಇದಕ್ಕಾಗಿ ನಮ್ಮಲ್ಲೇ 15 ವರ್ಕ್‌ಷಾಪು ಯೂನಿಟ್ಟುಗಳಿವೆ. ಈ ವರ್ಕ್‌ಷಾಪುಗಳಲ್ಲೇ ಇವನ್ನೆಲ್ಲಾ ರಿಪೇರಿ ಮಾಡುತ್ತಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—(ಎ) ಗೆ ಉತ್ತರವಾಗಿ 187, 184, 166 ಎಂದಿದೆ. ಇವುಗಳ ಪೈಕಿ (ಬ) ಗೆ ಕೊಟ್ಟಿರುವ ಉತ್ತರದಲ್ಲಿ 43, 45, 44 ಮಾತ್ರ ಕೆಲಸ ಮಾಡಲು ಯೋಗ್ಯವಾಗಿವೆ ಎಂದಿದೆ ಮಿಕ್ಕವುಗಳು ಏನಾದವು ?

ಶ್ರೀ ಎನ್. ರಾಚಯ್ಯ.—ಎಲ್ಲಾ ರಿಪೇರಿಗಳು ಆಗಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—58-59 ರಲ್ಲಿ 187, 59-60 ರಲ್ಲಿ 184 ಮತ್ತು 60-61 ರಲ್ಲಿ 186 ಇವೆ. ಇವುಗಳಲ್ಲಿ ಕೆಲಸ ಮಾಡಲು ಲಾಯಕ್ಕಾದವು 43, 45, 44 ಎಂದಿದೆ. ಎಂದರೆ ನೂರಕ್ಕೆ ಮೇಲ್‌ಪಟ್ಟು ರಿಪೇರಿಯಾಗಬೇಕು ಎಂದರೆ, ಇದರ ಮೇಲೆ ಡೆಡ್ ಕ್ಯಾಪಿಟಲ್, ಇಂಟರೆಸ್ಟು ಏನಾಯಿತು, ಇದರಿಂದಾಗಿ ರೈತರಿಗೆ ಅನುಕೂಲವೂ ಇಲ್ಲ. ಇಂತಹವುಗಳನ್ನು ಏಕೆ ಇಟ್ಟುಕೊಂಡಿದ್ದೀರಿ ?

†Indicates that the remarks or speeches have not been revised by the Member concerned.

ಶ್ರೀ ಎನ್. ರಾಚಯ್ಯ.—ಈಗಾಗಲೇ 62 ಟ್ರಾಕ್ಟರುಗಳನ್ನು ಆಕ್ಷನ್ ಮಾಡಬೇಕು ಮತ್ತು ಈ ರೀತಿಯಾಗಿ ಡಿಸ್‌ಪೋಸ್ ಮಾಡಬೇಕೆಂದು ಆಜ್ಞೆಯನ್ನೂ ಮಾಡಿದೆ. ಒಂಬತ್ತನ್ನು ಸ್ಕ್ರಾಪ್ ಮಾಡಬೇಕೆಂದು ಇದೆ. ಹತ್ತು ವರ್ಷಗಳಿಗೆ ಮೇಲ್ಪಟ್ಟ ಕೆಲಸ ಮಾಡಿರತಕ್ಕವುಗಳನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ ಎಂದು ಈ ರೀತಿ ಮಾಡಲಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—(ಬಿ) ಯ ಉತ್ತರದಲ್ಲಿ ಕೊಟ್ಟಿರುವ, 43, 45 ಮತ್ತು 44, ಇವುಗಳನ್ನು ಬಿಟ್ಟು ಸ್ಕ್ರಾಪ್ ಹಾಡುವುದು ಎಷ್ಟು, ರಿಪೇರಿಯಾಗಬೇಕು ಮತ್ತು ಇನ್ನುಳಿದವುಗಳು ಏನಾಗಿವೆ ಎನ್ನುವುದರ ಪೂರ್ತಿ ವಿವರಗಳನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎನ್. ರಾಚಯ್ಯ.—ಈಗ 44 ಕೆಲಸ ಮಾಡುತ್ತಿವೆ. 51 Tractors are under repairs and capable of being repaired. Spare parts for repairing these machines are being procured. These leave about 71 tractors which are beyond economic repairs, 9 are to be scrapped and 62 to be auctioned in Public Auction.

ಶ್ರೀ ಕೆ. ಕೆಂಚಪ್ಪ.—(ಇ) ಗೆ ಉತ್ತರವಾಗಿ 2.07 ಲಕ್ಷ, 3.27 ಲಕ್ಷ ಮತ್ತು 2.27 ಲಕ್ಷ ಎಂದು ಇರುವುದರಲ್ಲಿ ಇಂಜನೀಯರುಗಳ ಸಿಬ್ಬಂದಿಗಾಗಿ ಎಷ್ಟು ಎಷ್ಟು ಖರ್ಚಾಗಿದೆ ಮತ್ತು ಇಷ್ಟು ಸಿಬ್ಬಂದಿಯನ್ನೂ ಏತಕ್ಕಾಗಿ ಇಟ್ಟುಕೊಂಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ತಾವು ಬರೀ ಖರ್ಚಾಗಿರುವುದನ್ನೆ ನೋಡುತ್ತಿದ್ದೀರಿ. 58-59 ರಲ್ಲಿ ನಮಗೆ 7, 39, 218 ರೂಪಾಯಿಗಳಷ್ಟು ರೆವಿನ್ಯೂ ಬಂದಿದೆ. ಮತ್ತೆ 59-60 ರಲ್ಲಿ 8, 13, 868 ರೂಪಾಯಿಗಳಷ್ಟು ರೆವಿನ್ಯೂ ಬಂದಿದೆ. ಮತ್ತು ಈ ಡಿಸೆಂಬರು ಅಖೈರುವರೆಗೆ 7, 27, 783 ರೂಪಾಯಿಗಳು ಕಳೆದ ವರ್ಷಕ್ಕೆ ಬಂದಿದೆ. ಇದೇ ರೀತಿ ರೆವಿನ್ಯೂ ಕೂಡ ಬಂದಿದೆ. ಖರ್ಚೂ ಬಂದಿದೆ.

ಶ್ರೀ ಕೆ. ಕೆಂಚಪ್ಪ.—ಬರೀ ಇಂಜನೀಯರುಗಳಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಬರೀ ರಿಪೇರಿ ಮಾಡುವ ಉದ್ದೇಶಕ್ಕಾಗಿ ಈ ಬುಲ್‌ಡೊಜರುಗಳನ್ನು ಇಟ್ಟುಕೊಂಡಿಲ್ಲ. ರೈತರುಗಳಿಗೆ ಸಾಧ್ಯವಾದಷ್ಟು ಕಡಿಮೆಯ ದರದಲ್ಲಿ ಅವರಿಗೆ ಒದಗಿಸಬೇಕೆಂದು ಮತ್ತು ಅವರಿಗೆ ಅನುಕೂಲ ಮಾಡಬೇಕೆಂದು ಇದೆ. ಲಾಭಕ್ಕೊಸ್ಕರವಾಗಿ ನಾವು ಇಟ್ಟುಕೊಂಡಿಲ್ಲ.

ಶ್ರೀ ಕೆ. ಕೆಂಚಪ್ಪ.—ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ ನೀವು ರಿಪೇರಿ ಎನ್ವಾಬ್ಲಿಷ್‌ಮೆಂಟಿಗಾಗಿ ಎಷ್ಟು ಖರ್ಚು ಮಾಡುತ್ತಿದ್ದೀರಿ ?

(No answer)

Sri J. B. MALLARADHYA.—The Hon'ble Minister was pleased to state that it is not a question of profit. May I know what is the return on the capital invested on this ?

Sri N. RACHAIAH.—I have called for that information. As the Hon'ble Member has asked for information for the last three years, I was not able to get it early.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—58-59, 59-60, ಮತ್ತು 60-61 (ಸಿ) ಗೆ ಉತ್ತರವಾಗಿ ಬಾಡಿಗೆ ಸರಕಾರಕ್ಕೆ ಪೂರ್ತಿ ಬಂದಿದೆಯೋ ಇಲ್ಲ ಇನ್ನೂ ಬಾಕಿ ಉಳಿದಿರುವುದು ಎಷ್ಟು ?

ಶ್ರೀ ಎನ್. ರಾಚಯ್ಯ.—ಬೇರೆ ಪ್ರಶ್ನೆ ಕೇಳಿದರೆ ಆಗ ಉತ್ತರ ಕೊಡಬಹುದು.

ಶ್ರೀಮತಿ ಬನವಾಸಿ ಜೇತ್ಪರಿ.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಟ್ರಾಕ್ಟರ್ ಸರ್ವೀಸಿಂಗ್ ಸೆಂಟರ್ ತೆಗೆಯುವ ಯೋಜನೆ ಏನಾದರೂ ಸರ್ಕಾರದವರು ಮಾಡಿದ್ದಾರೆಯೇ ?

ಶ್ರೀ ಎಚ್. ರಾಮಯ್ಯ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಚ್. ವಿ. ಕಾಪಲಗಿ.—ಪ್ರತಿಯೊಂದು ಟ್ರಾಕ್ಟರು, ಬುಲ್ ಡೋಜರೂ ಎಷ್ಟು ವರ್ಷ ಕೆಲಸ ಕೊಟ್ಟಿದೆ?

ಶ್ರೀ ಎಚ್. ರಾಮಯ್ಯ.—ಸುಮಾರು ಹತ್ತು ವರ್ಷ ಕೊಟ್ಟಿದೆ. Subject to correction.

ಶ್ರೀ ಡಿ. ಎಚ್. ರುದ್ರಪ್ಪ.—ದೇಶದಲ್ಲಿ ತಾಲ್ಲೂಕಿಗೆ ಒಂದೊಂದು ಟ್ರಾಕ್ಟರ್ ಇರುವ ಹಾಗೆ ಮಾಡಲಿಕ್ಕೆ ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಚ್. ರಾಮಯ್ಯ.—ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸುಮಾರು ಮೂವತ್ತು ಬುಲ್‌ಡೋಜರುಗಳನ್ನು ತೆಗೆದುಕೊಳ್ಳಬೇಕೆಂದು ಇದೆ. ಮತ್ತು ಸ್ವಶ್ನೆ ಕಾಲದಲ್ಲಿ ಮಾನ್ಯಸದಸ್ಯರ ಗಮನಕ್ಕೆ ತಂದಿದ್ದೇನೆ. ರೈತರು ತಮ್ಮೇ ಸ್ವಂತವಾಗಿ ಟ್ರಾಕ್ಟರುಗಳನ್ನೂ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಹೈರ್ ಪರ್ಚೇಸ್ ಸಿಸ್ಟಂ ಮೇರೆ 100ಕ್ಕಿಂತಲೂ ಹೆಚ್ಚು ಟ್ರಾಕ್ಟರುಗಳನ್ನೂ ಒದಗಿಸಿದ್ದೇವೆ. ಅದಲ್ಲಿ ಫಲಾನುಭವಿಗಳನ್ನೇ ಹೆಚ್ಚಾಗಿ ಕೇಳುತ್ತಾಯಿರುವುದರಿಂದ ಎಷ್ಟು ಬರುತ್ತದೆಯೋ ಅಷ್ಟನ್ನು ಸಹಿಸ್ಸಿ ಮಾಡುತ್ತೇವೆ. ಸರ್ಕಾರದವರು ಒದಗಿಸುವುದು ಒದರಿಂದಲೇ ಅಲ್ಲ. ರೈತರು ತಮ್ಮ ಸ್ವಂತ ಟ್ರಾಕ್ಟರಿನಿಂದ ತಾವೂ ಉಳುಮೆ ಮಾಡಿ ಅಕ್ಕಪಕ್ಕದ ರೈತರಿಗೂ ಕೊಡುತ್ತಾ ಇರುವುದರಿಂದ ಎಷ್ಟೇನೂ ಇದರ ಕೊರತೆ ಕಾಣುತ್ತಾ ಇಲ್ಲ.

Dr. A. R. KARISIDDAPPA.—The Hon'ble Minister was pleased to say that these tractors and bulldozers are maintained by Government in order to help the ryots and that Government is not motivated merely by the consideration of profit or loss. Will the Government be pleased to reduce the rent charged per hour for bulldozers in view of the fact that it is far too high now?

Sri N. RACHAIAH.—I agree with the Hon'ble Member. In fact, Government have been receiving representations that the rates must be reduced. This aspect is also actually being examined.

ಶ್ರೀ ಜಿ. ದುಗ್ಗಪ್ಪ.—60-61ರಲ್ಲಿ ಕೆಲಸ ಮಾಡುತ್ತಿರುವ ಟ್ರಾಕ್ಟರುಗಳ ಸಂಖ್ಯೆ 44 ಎಂದು ಹೇಳಿದ್ದೀರಿ. ಜಿಲ್ಲಾವಾರು ವಿವರ ಕೊಡುವುದಕ್ಕಾಗುತ್ತದೆಯೇ?

ಶ್ರೀ ಎಚ್. ರಾಮಯ್ಯ.—ಸಾಮ್ಯಾವಾಗಿ ಇಡೀ ಸ್ಟೇಟ್‌ನಲ್ಲಿ 15 ಯೂನಿಟ್ಟುಗಳನ್ನು ಇಟ್ಟು ಕೊಂಡಿದ್ದೇವೆ. ಆ ಯೂನಿಟ್ಟುಗಳಲ್ಲಿ ಕೆಲಸ ಮಾಡುತ್ತಾ ಇರುತ್ತವೆ. ಕೆಲವು ಸಂದರ್ಭಗಳಲ್ಲಿ ಡಿಸ್ಟ್ರಿಕ್ಟ್‌ನಿಂದ ಡಿಸ್ಟ್ರಿಕ್ಟ್‌ಗೆ ಅಗತ್ಯ ಬಿದ್ದಾಗ ಟ್ರಾನ್ಸ್‌ಫರ್ ಮಾಡುತ್ತೇವೆ. ಆ ಅಂಕಿಅಂಶ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀಮತಿ ಸುಶೀಲಾ ಬಾಯಿ ಷಾ.—ಟ್ರಾಕ್ಟರುಗಳು, ಬುಲ್‌ಡೋಜರುಗಳು ಸಿಕ್ಕದೆ ತೊಂದರೆಯಾಗಿದೆ ಎಂದು ರೈತರು ಹೇಳುತ್ತಾರೆ. ಇವತ್ತು ಕೇಳಿದರೆ ವರ್ಷ ಎರಡು ವರ್ಷ ಆಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ರಾಮಯ್ಯ.—ಸಂಬಂಧಪಟ್ಟ ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿಗಳಿಗೂ ಮತ್ತು ಪ್ರಧಾನ ಮಂತ್ರಿಗಳಿಗೂ ಮುಖ್ಯ ಮಂತ್ರಿಗಳು ಮತ್ತು ನಾನೂ ಇಬ್ಬರೂ ಕೂಡ ಬಹಳ ಒತ್ತಾಯವಾಗಿ ಟ್ರಾಕ್ಟರು ಮತ್ತು ಬುಲ್‌ಡೋಜರುಗಳು ಬೇಕೆಂದು ಪದೇ ಪದೇ ಒತ್ತಾಯ ಮಾಡುತ್ತಾ ಇದ್ದೇವೆ. ಅವರು ಭರವಸೆ ಕೊಡುತ್ತಾ ಇದ್ದಾರೆ. ಸಹಿಸ್ಸಿ ಬಂದಾಗ ಸಾಧ್ಯವಾದಷ್ಟೂ ಕೊಡುತ್ತೇವೆ ಎಂದು ಹೇಳಿದ್ದಾರೆ. ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀಮತಿ ಬಸವರಾಜೇಶ್ವರಿ.—ಟ್ರಾಕ್ಟರ್ಸ್ ಹರಾಜು ಮಾಡಿದ್ದೇವೆ ಎಂದು ಹೇಳಿದಿರಿ. ರಾಯಚೂರು ಜಿಲ್ಲೆಯಲ್ಲಿ ಯಾವುದಾದರೂ ಹರಾಜು ಮಾಡುತ್ತೀರಾ?

ಶ್ರೀ ಎಚ್. ರಾಮಯ್ಯ.—ಇಂಥಾ ಜಿಲ್ಲೆಯದು ಅಂತ ಅಲ್ಲ. ಎಲ್ಲೆಲ್ಲಿ ಹರಾಜು ಮಾಡಬೇಕಾದಂಥವು ಇವೆ ಅಂಥದ್ದು ಇದೀ ಜಿಲ್ಲೆಯಲ್ಲಿ ಎರಡಾ ಕಡೆಯಲ್ಲಿ ಮಾಡುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ರಾಭ ನಷ್ಟ ಯಾವದೂ ಇಲ್ಲದಂತೆ ಕೆಲಸ ಮಾಡುತ್ತೇವೆ ಎಂದು ಹೇಳಿದಿರಿ. ಈಗ ಹಾಗಿರತಕ್ಕ ಬಂಡವಾಳಕ್ಕೇ ನಷ್ಟವಾಗಿದೆಯೇ ಅಥವಾ ರಾಭ ಬಂದಿದೆಯೇ?

ಶ್ರೀ ಎಚ್. ರಾಮಯ್ಯ.—ನಷ್ಟ ಮಾಡಿಕೊಂಡು ಏಕೆ ಇದನ್ನೂ ನಡೆಸುತ್ತಾರೆ ಎಂದು ಕೇಳುತ್ತಾರೆ. ಒಂದು ಕಡೆ ನಷ್ಟ ಮಾಡಿಕೊಂಡು ನಡೆಸಬಾರದೆಂಬ ವಾದ ಇದೆ. ಇನ್ನೊಂದು ಕಡೆ ರಾಭವಾಗಲೀ, ನಷ್ಟವಾಗಲೀ ಈ ಸಾಕಾರ್ಯ ರೈತರಿಗೆ ಒದಗಿಸಬೇಕೆಂದು ವಾದ ಇದೆ. ಇದನ್ನೆಲ್ಲಾ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪರಿಶೀಲನೆ ಮಾಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನನ್ನ ಪ್ರಶ್ನೆ ರಾಭ ನಷ್ಟ ನಿರೀಕ್ಷಣೆ ಮಾಡುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು–ರಾಭ ಬಂದಿದೆಯೇ, ನಷ್ಟವಾಗಿದೆಯೇ ಎಂದು ಅದಕ್ಕೆ ಉತ್ತರ ಹೇಳಲಿಲ್ಲ. ರಾಭ, ನಷ್ಟ ಇಲ್ಲದಂತೆ work out ಮಾಡುವುದಕ್ಕಾಗುತ್ತದೆಯೇ?

ಶ್ರೀ ಎಚ್. ರಾಮಯ್ಯ.—ಪ್ರತಿ ವರ್ಷವೂ ಕೂಡ ಒಂದು ಲಕ್ಷದಿಂದ ಎರಡು ಲಕ್ಷದವರೆಗೂ ನಷ್ಟ ಹೊಂದುತ್ತಾ ಇದೆ, ಎಂದ ಮೇಲೆ ಇದನ್ನೆಲ್ಲಾ ರೈತರ ಹಿತಕ್ಕೆ ಉಪಯೋಗ ಮಾಡುತ್ತಾ ಇದ್ದೇವೆ, ತಮ್ಮ ಸಲಹೆಯನ್ನೂ ಕೂಡ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ದೇಶದಲ್ಲಿ ಆಹಾರ ಉತ್ಪನ್ನ ಹೆಚ್ಚು ಮಾಡುವ ದೃಷ್ಟಿಯಿಂದ ಮತ್ತು ರೈತರು ಬಹಳ ಬಡವರು ಎಂದು ಈ ಟ್ರಾಕ್ಟರು ಮತ್ತು ಬುಲ್‌ಡೋಜರುಗಳನ್ನು ಒದಗಿಸುತ್ತಿದ್ದೀರಿ. 187 ಇದ್ದುದನ್ನೂ 43ಕ್ಕೆ ಇಳಿಸಬೇಕಾದರೆ ರೈತರಿಗೆ ಹೆಚ್ಚು ಅನುಕೂಲ ಮಾಡಿಕೊಟ್ಟಿದೀರಿ ಎಂದು ತಮ್ಮ ಅಭಿಪ್ರಾಯವೇ?

ಶ್ರೀ ಎಚ್. ರಾಮಯ್ಯ.—ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಾಶ್ಚಿಮಾತ್ಯ ದೇಶಗಳಲ್ಲಿ ಎರಡಾರದರೂ ಈ ರೀತಿ ಹತ್ತು ವರ್ಷದಲ್ಲೇ ಹರಾಜು ಆಗುವ ಮಟ್ಟಕ್ಕೆ ಒಂದನ್ನು ಸರ್ಕಾರದವರಿಗೆ ಮನಕ್ಕೆ ಬಂದಿದೆಯೇ?

ಶ್ರೀ ಎಚ್. ರಾಮಯ್ಯ.—ಅದಕ್ಕೆ ನಮ್ಮ ದೇಶದಲ್ಲಿ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳನ್ನೂ ತಯಾರು ಮಾಡತಕ್ಕ ಒಂದು ಕಾರ್ಖಾನೆಯನ್ನೂ ಮಾಡಬೇಕೆಂದು ಕೇಂದ್ರ ಸರ್ಕಾರದ ಮನಸ್ಸಿನಲ್ಲಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅದು ಸರಿ ನಮ್ಮ ದೇಶದಲ್ಲಿ ಈ ಟ್ರಾಕ್ಟರು ಮತ್ತು ಬುಲ್‌ಡೋಜರುಗಳು ಕೆಲಸಕ್ಕೆ ಬಾರದೇ ಹರಾಜು ಹಾಕುವ ಮಟ್ಟಕ್ಕೆ ಬಂದಿರುವಂತೆ ಪಶ್ಚಿಮಾತ್ಯ ದೇಶಗಳಲ್ಲಿ ಎಲ್ಲಾದರೂ ಬಂದಿರುವದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ರಾಮಯ್ಯ.—ಬೇರೆ ದೇಶದ ವಿಚಾರ ನಾನು ಹೇಗೆ ಹೇಳುವುದು?

ಶ್ರೀ ಜಿ. ನಾರಾಯಣಗೌಡ.—ಹಾಲಿ ಕೆಲಸ ಮಾಡತಕ್ಕ ರಾರಿ, ಟ್ರಾಕ್ಟರ್, ಬುಲ್‌ಡೋಜರುಗಳನ್ನೂ ಆಯಾಯಾ ಜಿಲ್ಲಾ ಕಡೆ ಕಾರ್ಖಾನೆಗಳಲ್ಲೇ ಇಟ್ಟುಕೊಂಡರೆ ರೈತರಿಗೆ ದೊರೆಯಲು ಅನುಕೂಲವಾಗತಕ್ಕ, ಆ ವ್ಯವಸ್ಥೆಯನ್ನೂ ಮಾಡುತ್ತೀರಾ?

ಶ್ರೀ ಎಚ್. ರಾಮಯ್ಯ.—ಪ್ರತಿಯೊಂದು ಜಿಲ್ಲೆಯಲ್ಲೂ ಆ ವ್ಯವಸ್ಥೆ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಭಾರಿ ಪ್ರಮಾಣದಲ್ಲಿ ಟ್ರಾಕ್ಟರು, ಬುಲ್‌ಡೋಜರು ಗಳನ್ನು ಕೊಂಡಿದ್ದೀರಿ. ತಂದು ತೆಗೆದುಕೊಂಡ ತಾರೀಖಿನಿಂದ ಇಲ್ಲಿಯವರೆಗೂ ಎಷ್ಟು ಸಾವಿರ ಎಕರೆ ಜಮೀನು ಉಳುಮೆ ಮಾಡುವುದಕ್ಕೆ ಸಾಧ್ಯವಾಗಿವೆ?

Mr. SPEAKER.—That is a separate question.

Sri C. J. MUCKANNAPPA.—What is the total cost to Government on account of these tractors, bulldozers and lorries?

Sri N. RACHAIAH.—I have already replied. This information will be supplied to the House.

ಶ್ರೀ ಬಿ. ಇ. ರಾಮಯ್ಯ.—ಕೋ ಆಪರೇಟೀವ್ ಸೊಸೈಟಿಗಳಿಗೆ ಈ ಟ್ರಾಕ್ಟರು ಬುಲ್‌ಡೋಜರ್‌ಗಳನ್ನೂ ಕೊಡುತ್ತೀರಾ?

ಶ್ರೀ ಎಚ್. ರಾಚಯ್ಯ.—ಕೋ ಆಪರೇಟೀವ್ ಸೊಸೈಟಿಗಳಿಗೆ ಕೊಡಬೇಕೆಂದು ಕೇಳಿದರೆ ಕೊಡುತ್ತೇವೆ, ಹಾಗೇ ಸ್ಥಳೀಯ ಸಂಸ್ಥೆಗಳಿಗೂ ಕೊಡಬೇಕೆಂದು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಹೊಸದಾಗಿ ನೀರಾವರಿ ಆಗುವ ಕಾಲಕ್ಕೆ ಭೂಮಿ ಸಮ ಮಾಡುವ ಸಲುವಾಗಿ ಟ್ರಾಕ್ಟರು, ಬುಲ್‌ಡೋಜರುಗಳನ್ನೂ ಕೊಡಲಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ರಾಚಯ್ಯ.—ಕೊಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ.—ಕೆಲವು ಸೊಸೈಟಿಗಳವರು ಈಗಾಗಲೇ ಪೈರ್ ಪರ್ಚೇಸ್ ಸಮ್ಮಂ ಮೇಲೆ ನಷ್ಟವೆ ಮಾಡಬೇಕೆಂದು ಕೇಳಿದ್ದರೂ ಅವರಿಗೆ ಕೊಟ್ಟಿಲ್ಲ ಕಾರಣವೇನು?

ಶ್ರೀ ಎಚ್. ರಾಚಯ್ಯ.—ನಮ್ಮ ಕೋಟಾ ಬಂದ ಹಾಗೆಲ್ಲಾ ಕೊಡುತ್ತೇವೆ.

ಶ್ರೀ ಎಸ್. ಆರ್. ರಾಮಯ್ಯ.—ಟ್ರಾಕ್ಟರ್ ಮತ್ತು ಬುಲ್‌ಡೋಜರ್‌ಗಳನ್ನು ಪಿಡಬ್ಲ್ಯೂಡಿ ಅವರಿಗೂ ಕೊಡುತ್ತಾ ಇದ್ದೀರಿ ಅಲ್ಲವೇ?

ಶ್ರೀ ಎಚ್. ರಾಚಯ್ಯ.—ಅದು ಇಂಟರ್‌ನಲ್ ಅರೇಂಜ್‌ಮೆಂಟು.

Dr. A. R. KARISIDDAPPA.—Are these lorries given on hire to the ryots?

Sri N. RACHAIAH.—If they are actually needed up them, Government will not heritate to give them.

ಶ್ರೀ ಕೆ. ಕೆಂಚಪ್ಪ.—ಈಗಿರತಕ್ಕ ಒಟ್ಟು 187 ಟ್ರಾಕ್ಟರುಗಳು 51 ಬುಲ್‌ಡೋಜರ್ ಗಳು, 24 ರಾಲಿಗಳ ಪೈಕಿ 1950 ರಿಂದ ಇಲ್ಲಿಯವರೆಗೂ ಯಾವಾಗಲಾದರೂ ಒಂದು ವರ್ಷ ಅದರ ಅರ್ಧದಷ್ಟಾದರೂ ಕೆಲಸ ಮಾಡಿವೆಯೇ?

Sri N. RACHAIAH.—That information will be furnished.